ಉದಯ ಟಿ.ವಿ. ಅವರು ಬಂದು ಮುಖಾ-ಮುಖಿ ಕಾರ್ಯಕ್ರಮಕ್ಕೆ ಬನ್ನಿ ಎಂದು ಕರೆಯುತ್ತಾರೆ. ಕಡೆಗೆ ಮಾಡರೇಟರ್ ಒಬ್ಬರು ಇರುತ್ತಾರೆ. ಆದುದರಿಂದ ಇದನ್ನು ಮಾಡಿ ಎನ್ನತಕ್ಕಂತಹ ಒಂದು ಚಿಂತನೆ ಇತ್ತು. ಆದರೆ ನೀತಿಯ ಪ್ರಶ್ನೆ ಆದಮೇಲೆ ಪ್ರತೀ ವಾರ ಪ್ರತೀ ತಿಂಗಳು ಮಾಡಬೇಕಾದರೆ ಒಂದು ನೀತಿಯ ಪ್ರಶ್ನೆ ಮಾಡಬೇಕಾಗುತ್ತದೆ. ಆದರೆ ಇದರ ಬಗ್ಗೆ ಚಿಂತನೆಯನ್ನು ಮಾಡುತ್ತಾ ಇದ್ದೇನೆ. ಬೇಕು ಎಂದರೆ ಆ ಕಾರ್ಯಕ್ರಮವನ್ನು ಮಾಡೋಣ, ಆದರೆ ನಮ್ಮ ಹುಳುಕನ್ನು ಮುಚ್ಚಬೇಕು ಎಂದು ಏನೂ ಇಲ್ಲ ನಾವು ಮಾಡುವ ಕೆಲಸವನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಮಾಡುತ್ತಿದ್ದೇವೆ.

ರಾಜ್ಯದಲ್ಲಿ ಒಂದು ಅಂಕಿ ಲಾಟರಿ ಬಗ್ಗೆ ಪ್ರಸ್ತಾವ.

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೆ, ಇವತ್ತು ರಾಜ್ಯದಲ್ಲಿ ಅಧಿಕೃತವಾಗಿ ಸಿಂಗಲ್ ನಂಬರ್ ಲಾಟರಿ, ಇನ್ಸ್‌ಟೆಂಟ್ ಲಾಟರಿ ಜಾರಿಯಲ್ಲಿ ಇಲ್ಲ. ಸಭಾಧ್ಯಕ್ಷರೆ, ತಮ್ಮ ಮುಖಾಂತರ ಉಪ ಮುಖ್ಯಮಂತ್ರಿಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಉಪಾಧ್ಯಕ್ಷರು : ಸಿದ್ದರಾಮಯ್ಯನವರೇ, ನೀವು ಅವರು ಮಾತನಾಡುವುದನ್ನು ಕೇಳಿ. ಅವರು ಪ್ರಶ್ನೆ ಕೇಳುವುದಕ್ಕೆ ನಿಂತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ವೆಂಕಟೇಶನಿಗೆ ವೆಂಕಟೇಶ ಸುಪ್ರಭಾತ ಇತ್ತಂತೆ, ಏಳು ಎದ್ದೇಳು ವೆಂಕಟೇಶ್ವರ ಎಂದು. ಈ ಏಳು ಏದ್ದೇಳು ಸಿದ್ದರಾಮೇಶ ಎಂದು ಕರೆಯಬೇಕಾದ ಪರಿಸ್ಥಿತಿ ಬಂದಿದೆ.

ಶ್ರೀ ಸಿದ್ದರಾಮಯ್ಯ : ಇಲ್ಲಾ, ಒಂದೊಂದು ಸಾರಿ ಹಾಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಏಕೆ ನೀವು ಹಾಗೆ ಮಾಡುತ್ತೀರಿ?

ಶ್ರೀ ಸಿದ್ದರಾಮಯ್ಯ : ಏನೋ ವಿಷಯ ಮಾತನಾಡುತ್ತಾ ಇದ್ದೆವು.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಅಧಿಕೃತವಾಗಿ ಒಂದಂಕಿ ಲಾಟರಿ ಇಲ್ಲ, ಇನ್ಸ್‌ಟೆಂಟ್ ಲಾಟರಿ ಇಲ್ಲ,. ಆದರೆ ಬೆಂಗಳೂರು ನಗರದಲ್ಲಿ ಪ್ರಮುಖವಾದ ಪ್ರದೇಶಗಳಲ್ಲಿ ಪೋಲೀಸ್ ಠಾಣೆಗಳ ಪಕ್ಕದಲ್ಲಿ ರಾಜಾರೋಷವಾಗಿ ಈ ಲಾಟರಿಗಳು ನಡೆಯುತ್ತಾ ಇವೆ. ಈ ಎರಡಂಕಿ ಲಾಟರಿ. ಆದರೆ ಬೆಂಗಳೂರಿನಲ್ಲಿ ಒಂದಂಕಿ ಲಾಟರಿಯನ್ನು ನಡೆಸುತ್ತಿರುವಂತಹ ಮಹನೀಯರು ಇದ್ದಾರೆ. ಅವರು ಯಾರೆಂದರೆ ಸುಗಾಲ್, ಧಮಾನಿ ಎಂದು. ಇವರು ಹೊರಗಡೆಯಿಂದ ಬಂದಂತಹ ಮಹನೀಯರು. ಉಪ್ಪಾರ್ ಪೇಟೆ ಪೋಲೀಸ್ ಸ್ಟೇಷನ್ ಪಕ್ಕದಲ್ಲಿ ಇರುವ ಬಾಲಾಜಿ ಏಜೆನ್ಸಿ. ಮೆಜೆಸ್ಟಿಕ್ ಥಿಯೇಟರ್ ಪಕ್ಕ ಇರುವ ಪೈ ಏಜೆನ್ಸಿ, ಇವರು ಇವತ್ತು ರಾಜಾರೋಷವಾಗಿ ಎರಡಂಕಿ ಲಾಟರಿ ಹೆಸರಿನಲ್ಲಿ ಒಂದಂಕಿ ಮಾಡಿ ಇವತ್ತು ಲಕ್ಷಾಂತರ ಮನೆಗಳನ್ನು ಸೂರೆ ಮಾಡುವುದಕ್ಕೆ ಹೊರಡುತ್ತಿದ್ದಾರೆ. ನಮ್ಮ ಸಾಂಪ್ರದಾಯಿಕ ಲಾಟರಿ ಏನು ಇದೆ,

10 ಗಂಟೆಗೆ, 10.30ಕ್ಕೆ 11 ಗಂಟೆಗೆ ಇದು ಎಲ್ಲಾ ಯಾವ ಲಾಟರಿ? ಇದೆಲ್ಲಾ ನಾಗಲ್ಯಾಂಡ್ ಲಾಟರಿ. ನಾಗಲ್ಯಾಂಡ್‌ನಲ್ಲಿ ಲಾಟರಿ ಆಗಿದ್ದು ಅವರು ಹೇಗೆ ಅರ್ಧ ಗಂಟೆಯಲ್ಲಿ ಮೆಸೇಜ್ ಬರುತ್ತದೆ? ನಾಗಲ್ಯಾಂಡ್ ಲಾಟರಿ ಡ್ರಾ ನಾಗಲ್ಯಾಂಡ್‌ನಲ್ಲಿ ಆಗುತ್ತಾ ಇಲ್ಲ. ಬೆಂಗಳೂರಿನಲ್ಲಿ ಕೆಲವು ರೂಂಗಳಲ್ಲಿ ಕುಳಿತುಕೊಂಡು ಅವರು ಡ್ರಾ ಮಾಡಿ, ಆ ಲಾಟರಿ ರಿಸಲ್ಟ್ ಪೇಪರ್‌ನಲ್ಲಿ ಬರುತ್ತಾ ಇಲ್ಲ. ಪೇಜರ್ ಮುಖಾಂತರ ಕೊಡುತ್ತಾ ಇದ್ದಾರೆ. ಎಲ್ಲಾ ಅಧಿಕೃತ ವಿತರಕರಿಗೆ ಪೇಜರ್‌ನಲ್ಲಿ ಕೊಟ್ಟು ಪೇಜರ್‌ನಲ್ಲಿ ರಿಸಲ್ಟ್ ಬರುವ ಹಾಗೆ ಮಾಡುತ್ತಾ ಇದ್ದಾರೆ. ಇದು ಯಾವುದೂ ಕೂಡ ಆದಾಯದ ತೆರಿಗೆ ವ್ಯಾಪ್ತಿಗೆ ಬರುತ್ತಾ ಇಲ್ಲ, ಆಕಸ್ಮಾತ್ ಬಹುಮಾನ ಸಿಗದೇ ಇದ್ದಿದ್ದರೆ ರೆಗ್ಯುಲರ್ ಲಾಟರಿಯಲ್ಲಿ ಆ ಬಹುಮಾನದ ಹಣ ಎಲ್ಲಾ ಸರ್ಕಾರಕ್ಕೆ ಬರಬೇಕು. ಸರ್ಕಾರಕ್ಕೂ ಕೂಡ ಬರುತ್ತಾ ಇಲ್ಲ. ಒಟ್ಟಿನಲ್ಲಿ ಬೆಂಗಳೂರು ನಗರದಲ್ಲಿ ಮಧ್ಯಮ ವರ್ಗದವರು ಮತ್ತು ಕಾರ್ಮಿಕರು ಮತ್ತು ವಿದ್ಯಾರ್ಥಿಗಳನ್ನು ಏನು ಸೂರೆ ಮಾಡುತ್ತಾ ಇದ್ದಾರೆ, ಒಂದಂಕಿ ಲಾಟರಿ ಹೆಸರಿನಲ್ಲಿ ಅದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಾ ಈ ನಾಗಲ್ಯಾಂಡ್ ಲಾಟರಿ ಯಾರಿಗೆ ನೀವು ಪರ್‌ಮಿಷನ್ ಕೊಟ್ಟಿದ್ದೀರಾ ಸಾಂಪ್ರದಾಯಿಕವಾಗಿ ಮಾಡಬೇಕು ಎಂದು, ಅದರ ಸೋಲ್ ಡಿಸ್ಟ್ರಿಬ್ಯೂಟರ್ಸ್ ಮಿಲಿಟೆಂಟ್ಸ್‌ಗೆ ಇವತ್ತು ಇಲ್ಲಿಯ ಹಣವನ್ನು ಇಲ್ಲಿ ಸೂರೆ ಹೊಡೆದು ಎಲ್ಲಾ ತೆಗೆದುಕೊಂಡು ಹೋಗಿ ಕೊಡುತ್ತಾ ಇದ್ದಾರೆ. ಅದಕ್ಕೋಸ್ಕರ ಸರ್ಕಾರದ ಗಮನವನ್ನು ಸೆಳೆಯುತ್ತಾ ಇದ್ದೇನೆ. ಬೆಂಗಳೂರು ನಗರದ ಕಮೀಷನರ್‌ರವರಾದ ರೇವಣ್ಣಸಿದ್ದಯ್ಯನವರೇ ಹೇಳಿದ್ದಾರೆ, ಇದು ಬಹಳ ಮುಖ್ಯವಾದುದು, " ಒಂದಂಕಿ ಲಾಟರಿಯನ್ನು ಎರಡಂಕಿ ಲಾಟರಿ ರೂಪದಲ್ಲಿ ಮಾರುವುದರಿಂದ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ ಎರಡಂಕಿ ಲಾಟರಿಯನ್ನು ನಿಷೇಧಿಸುವುದು ಈಗ ಉಳಿದಿರುವ ದಾರಿ" ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಾ, ಬೆಂಗಳೂರು ನಗರವನ್ನು ಒಂದಂಕಿ ಲಾಟರಿಗಳ ರಾಜಧಾನಿಯನ್ನಾಗಿ ಮಾಡುವುದು ಬೇಡ, ಬೆಂಗಳೂರು ನಗರದ ವಿದ್ಯಾರ್ಥಿಗಳನ್ನು, ಕಾರ್ಮಿಕರನ್ನು, ಬಡವರನ್ನು ರಕ್ಷಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ. ಸರ್ಕಾರ ಇದರ ಬಗ್ಗೆ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಬಾರದು ತಕ್ಷಣ ಈ ಎರಡಂಕಿ ಲಾಟರಿಗಳು ಏನಿವೆ, ಇವನ್ನು ನಿಷೇಧ ಮಾಡುವುದಕ್ಕೆ ಹೆಜ್ಜೆ ಇಡಬೇಕು ಎಂದ ನಾನು ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

(ಹಲವಾರು ಜನ ಸದಸ್ಯರುಗಳು ಮಾತನಾಡಲು ಏಕಕಾಲದಲ್ಲಿ ಎದ್ದರು)

ಉಪಾಧ್ಯಕ್ಷರು : ಇದರ ಬಗ್ಗೆ ಮೂರು ಜನ ಸದಸ್ಯರು ಸೂಚನೆ ಕೊಟ್ಟಿದ್ದಾರೆ. ನಂತರ ನೀವು ಕೇಳಿ. ಸುರೇಶ್ ಕುಮಾರ್, ಮುನಿಯಪ್ಪ ಮತ್ತ ಪಿ.ಎಸ್. ಪ್ರಕಾಶ್ ಸೂಚನೆ ಕೊಟ್ಟಿದ್ದಾರೆ ಮುನಿಯಪ್ಪನವರನ್ನು ಕರೆದಿದ್ದೇನೆ, ಈಗ ಅವರು ಮಾತನಾಡಲಿ. ಆಮೇಲೆ ನೀವು ಮಾತನಾಡಿ. ಮೂರು ಜನ ಅಧ್ಯಕ್ಷರ ಕೊಠಡಿಗೆ ಬಂದು ತಮ್ಮ ಹೆಸರನ್ನು ಹೇಳಿ ಹೋಗಿದ್ದಾರೆ. ತಾವು ಅದರಲ್ಲಿ ಇವರು ಮಾತನಾಡಿದ ಮೇಲೆ ತಮಗೆ ಅವಕಾಶ ಕೊಡುತ್ತೇನೆ. ಆಗ ತಾವು ಮಾತನಾಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಸಹ ಈ ವ್ಯವಸ್ಥೆ ಇದೆ.

ಉಪಾಧ್ಯಕ್ಷರು : ನಾನು ಹೇಳುತ್ತಿರುವುದು ನಿಮಗೆ ಅರ್ಥವಾದ ಹಾಗಿಲ್ಲ. ನಾನು ಹೇಳುವುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಒಬ್ಬ ಸದಸ್ಯರನ್ನು ಕರೆದಾಗ ನೀವು ಎದ್ದು ನಿಂತುಕೊಂಡರೆ ನಾವು ಏನು ಮಾಡುವುದು? ಈಗ ಮುನಿಯಪ್ಪನವರೇ, ತಾವು ಮಾತನಾಡಿ.

ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸಳಿಯಲು ಇಚ್ಛಿಪಡುತ್ತೇನೆ. ಮಾನ್ಯ ಸದಸ್ಯರಾದಂಥ ಸುರೇಶ್ ಕುಮಾರ್‌ರವರು ಹೇಳಿದ ರೀತಿಯಲ್ಲಿ ನಮ್ಮ ಮೆಜೆಸ್ಟಿಕ್ ಪ್ರದೇಶದಲ್ಲಿ ಬೆಳಿಗ್ಗೆಯಾದರೆ ಸಾವಿರಾರು ಜನ ಯಾವುದೇ ಕೆಲಸ ಕಾರ್ಯಕ್ಕೆ ಹೋಗದೆ, ಅಲ್ಲಿ ಪ್ರತಿಕ್ಷಣದಲ್ಲೂ , ಅರ್ಧ ಗಂಟೆ, ಒಂದು ಗಂಟೆಗೆ ಏನು ಡ್ರಾ ಮಾಡುತ್ತಾರೆ, ಸಂಜೆಯಾದರೆ ಕಾರ್ಪೊರೇಷನ್ನಿನ 10 ಲಾರಿ ಬಂದರೂ ಅದನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಅಷ್ಟೊಂದು ಪ್ರಮಾಣದಲ್ಲಿ ಇದೆ. ಬಹಳ ಬಡ ಜನರು, ವರಮಾನ ರೇಖೆಗಿಂತ ಕಡಿಮೆ ಆದಾಯ ಇರತಕ್ಕಂಥವರು ಅದರಿಂದ ಹಾಳಾಗುತ್ತಿದ್ದಾರೆ. ದಯವಿಟ್ಟು ಸರ್ಕಾರ ಇದಕ್ಕೆ ತೀವ್ರವಾಗಿ ಗಮನವನ್ನು ಕೊಟ್ಟು ಅದನ್ನು ತಡೆಯಲು ಏನಾದರೂ ಪ್ರಯತ್ನವನ್ನು ಮಾಡಬೇಕು. ಎರಡು ಅಂಕಿ ಹೆಸರು ಹೇಳಿ ಒಂದಂಕಿಯನ್ನು ತೆಗೆದುಕೊಳ್ಳುತ್ತಾರಂತೆ, ಅದು ಏನು ಲೆಕ್ಕವೋ ನನಗೆ ಗೊತ್ತಿಲ್ಲ. ದಯವಿಟ್ಟು ಅದನ್ನು ತಡೆದರೆ ಬಹಳ ಕುಟುಂಬಗಳು ಈ ಅಪಾಯದಿಂದ ಪಾರಾಗುತ್ತವೆ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಎಸ್. ಪ್ರಕಾಶ್ (ಚಿಕ್ಕಪೇಟೆ) : ಮಾನ್ಯ ಉಪಾಧ್ಯಕ್ಷರೇ, ಎರಡಂಕಿ ಹೆಸರಿನಲ್ಲಿ ಒಂದಂಕಿ ಲಾಟರಿಯನ್ನು ಹರಿಯಾಣ ರಾಜ್ಯದವರು ಅರ್ಧ ಗಂಟೆಗೆ ಒಂದು ಸಾರಿ, ಒಂದು ದಿನಕ್ಕೆ 21 ಲಾಟರಿಯನ್ನು ಡ್ರಾ ಮಾಡುತ್ತಾರೆ. ಇವತ್ತು ಬೆಂಗಳೂರು ನಗರದಲ್ಲಿ ಸುಮಾರು 6 ಕೋಟಿ ರೂಪಾಯಿ ವ್ಯಾಪಾರ ನಡೆಯುತ್ತಿದೆ. ನನ್ನ ಕ್ಷೇತ್ರವಾದ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ ವ್ಯಾಪಾರ ನಡೆಯುತ್ತಿದೆ. ಇದರಲ್ಲಿ ಯಾರೂ ಶ್ರೀಮಂತರು ಭಾಗವಹಿಸುವುದಿಲ್ಲ. ಬೆಳಿಗ್ಗೆ ಎದ್ದರೆ ಹತ್ತಿ ಗಿರಣಿ ಕೆಲಸಕ್ಕೆ ಹೋಗುವವರು, ಸಿಲ್ಕ್ ಫ್ಯಾಕ್ಟರಿಗೆ ಹೋಗುವವರು, ಊದುಬತ್ತಿ ಫ್ಯಾಕ್ಟರಿಗೆ ಹೋಗುವವರು, ಈ ರೀತಿ ಕೂಲಿ ಕೆಲಸ ಮಾಡುವವರು ಯಾರೂ ಕೆಲಸಕ್ಕೆ ಹೋಗದೆ, ತಮ್ಮ ಹೆಂಡತಿಯ ತಾಳಿಯನ್ನು ಕಿತ್ತುಕೊಂಡು ಗಿರವಿ ಅಂಗಡಿಯಲ್ಲಿ ಅಡವಿಟ್ಟು ಅಥವಾ ಅದನ್ನು ಮಾರಾಟ ಮಾಡಿಯಾದರೂ ಸರಿ, ಬೆಳಿಗ್ಗೆ ಆರೂವರೆ ಗಂಟೆಗೆ ಸರಿಯಾಗಿ ಈ ಲಾಟರಿ ಟಿಕೆಟ್ ಅಂಗಡಿಗಳ ಮುಂದೆ ನಿಂತುಕೊಂಡು, ಲಾಟರಿ ಟಿಕೆಟ್‌ಗಳನ್ನು ತೆಗೆದುಕೊಂಡು ಅದರ ಡ್ರಾಗೋಸ್ಕರ ಅರ್ಧ ಗಂಟೆಗೆ ಒಂದು ಸಾರಿ ಕಾಯುತ್ತಿರುತ್ತಾರೆ. ಈ ಅರ್ಧ ಗಂಟೆ ಲಾಟರಿ ಡ್ರಾ ಯಾವ ರೀತಿ ಆಗುತ್ತದೆ ಎಂದರೆ ಬೆಂಗಳೂರಿನಲ್ಲಿ ಎಲ್ಲೋ ಒಂದು ಕಡೆ ಕುಳಿತುಕೊಂಡು ಲಾಟರಿಯನ್ನು ಡ್ರಾ ಮಾಡುತ್ತಾರೆ. ಹರಿಯಾಣ ಸ್ಟೇಟ್ ಲಾಟರಿ ಎಂದು ಹೇಳುತ್ತಾರೆ. ಆದರೆ ಅದು ಬೆಂಗಳೂರಿನಲ್ಲೇ ಮುದ್ರಣವಾಗುತ್ತಿದೆ. ಹರಿಯಾಣದಿಂದ ಯಾವುದೇ ಲಾಟರಿ ಬೆಂಗಳೂರು ನಗರಕ್ಕೆ ಸರಬರಾಜು ಆಗುತ್ತಿಲ್ಲ. ಇದರ ಬಗ್ಗೆ ನಾನು ಮಾನ್ಯ ಸಭಾಧ್ಯಕ್ಷರಿಗೆ ಕಳೆದ ತಿಂಗಳು 26ನೇ ತಾರೀಖು ದೀರ್ಘವಾಗಿ

ಒಂದು ಪತ್ರ ಬರೆದು, ಪತ್ರಿಕಾ ಹೇಳಿಕೆಯನ್ನು ಕೊಟ್ಟಾಗ ದಿನಾಂಕ 30-7-97ರಂದು ನಾನು ವಿಧಾನಸಭೆಯಲ್ಲಿ ಇದ್ದಾಗ ನನ್ನ ಮನೆಯಾಕೆಗೆ ಫೋನ್ ಮಾಡಿ ನನ್ನ ಕೊಲೆಯನ್ನೂ ಸಹ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಇದರ ಜೊತೆಗೆ ಲೈವ್‌ಬ್ಯಾಂಡ್, ಮಟ್ಕಾ, ಜೂಜು ಮುಂತಾದವುಗಳು ಬೆಂಗಳೂರು ನಗರದಲ್ಲಿ ಅವ್ಯಾಹತವಾಗಿ ನಡೆಯುತ್ತಿವೆ. ಇದರಿಂದ ಅಪರಾಧಗಳು, ದರೋಡೆ, ದೊಂಬಿ, ಲೂಟಿ, ಅಪಹರಣ ಇವಿಷ್ಟೂ ಕೂಡ ಬೆಂಗಳೂರು ನಗರದಲ್ಲಿ ನಡೆಯುತ್ತಿವೆ. ಇದೇ ರೀತಿಯಾಗಿ ಮುಂದೆಯೂ ಬೆಂಗಳೂರು ನಗರ ನಡೆದುಕೊಂಡು ಹೋದರೆ ಶಾಂತಿ ಹಾಳಾಗುತ್ತದೆ, ಬೆಂಗಳೂರು ನಗರ ಉದ್ಧಾರವಾಗುವುದಿಲ್ಲ. ಬಹಳಷ್ಟು ಜನ ನಮಗೆ ಶಾಪ ಹಾಕುತ್ತಾರೆ. ಆದ್ದರಿಂದ ದಯವಿಟ್ಟು ಈ ಎರಡಂಕಿ ಲಾಟರಿ ಏನು ನಡೆಯುತ್ತಿದೆ, ಅದನ್ನು ತಡೆಗಟ್ಟಿ, ಈ ಒಂದಂಕಿಯ ಹೆಸರಿನಲ್ಲಿ ನಡೆಯುತ್ತಿರತಕ್ಕಂಥ ಮೋಸದ ಜಾಲವನ್ನು ಪತ್ತೆ ಹಚ್ಚಿ ತಾವು ಕೂಡಲೇ ಈ ಲಾಟರಿ ಟಿಕೆಟ್ಟನ್ನು ರದ್ದು ಮಾಡಬೇಕು. ಇವತ್ತು ಹಲವಾರು ಕುಟುಂಬಗಳು ಹೊಟ್ಟೆಗೆ ಊಟ ಇಲ್ಲದೆ ಸಾಯುತ್ತಿದ್ದಾರೆ. ನನ್ನ ಕಛೇರಿಯ ಮುಂದೆ ಬೆಳಗಿನ ಹೊತ್ತು ನೂರಾರು ಹೆಣ್ಣು ಮಕ್ಕಳು ಬರುತ್ತಾರೆ. ಸಾಲ ಮಾಡಿ ನಾನು ಅವರಿಗೆ ಅಕ್ಕಿಯನ್ನು ತೆಗೆದುಕೊಟ್ಟಿದ್ದೇನೆ. ಇವತ್ತು ಇಂಥ ಒಂದು ಪರಿಸ್ಥಿತಿ ಬಂದಿದೆ. ಆದ್ದರಿಂದ ಕೂಡಲೇ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡು ಈ ಎರಡಂಕಿ ಲಾಟರಿಯನ್ನು ರದ್ದುಪಡಿಸಬೇಕು ಎಂದು ನಾನು ವಿನಯಪೂರ್ವಕವಾಗಿ ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೇ, ಈ ಒಂದಂಕಿ ಲಾಟರಿಯನ್ನು ನಿಲ್ಲಿಸಬೇಕು ಎಂದು ಹಿಂದೆ ಅನೇಕ ಸಾರಿ ಹೇಳಿದಂಥ ಸಮಯದಲ್ಲಿ ಸರ್ಕಾರ ನಾವು ಇದನ್ನು ನಿಲ್ಲಿಸುತ್ತೇವೆ ಎಂಬ ಭರವಸೆಯನ್ನು ಕೊಟ್ಟಿರತಕ್ಕಂಥಾದ್ದು ಉಂಟು. ಕರ್ನಾಟಕದ ಎಲ್ಲಾ ಕಡೆಯಲ್ಲೂ ಒಂದಂಕಿ ಲಾಟರಿ ನಡೆಯುತ್ತಿದೆ. ಇದಲ್ಲದೆ ಬೇರೆ ರಾಜ್ಯಗಳ ಲಾಟರಿಗಳು ಜಾಸ್ತಿಯಾಗಿವೆ. ನಮ್ಮ ರಾಜ್ಯದ ಲಾಟರಿಗಳಿಗಿಂತ ಬೇರೆ ರಾಜ್ಯಗಳದು ಜಾಸ್ತಿಯಾಗಿದೆ. ನಾವು ಅವರನ್ನು ತಡೆಹಿಡಿಯುವಂಥ ಯಾವುದೇ ನಿಯಂತ್ರಣಗಳು ಇಲ್ಲ. ಇವತ್ತು ಬೆಂಗಳೂರು ನಗರ ಲಾಟರಿ ನಗರವಾಗಿ ಕುಳಿತಿದೆ. ಇದು ಅತ್ಯಂತ ಕೆಟ್ಟ ಪರಿಣಾಮ ಬೀರಿದೆ. ಯಾವಯಾವ ಗಲ್ಲಿ, ರಸ್ತೆಗಳಲ್ಲಿ ನೋಡಿದರೂ ಒಂದು ಕಡೆ ಲಾಟರಿ, ಮತ್ತೊಂದು ಕಡೆ ಮಟ್ಕಾ ಇವು ಏನು ನಡೆಯುತ್ತಿವೆ, ಇದು ಬೆಂಗಳೂರಿನ ಹಣೆಬರಹ ನಿಜವಾಗಲೂ ಅತ್ಯಂತ ನಾಚಿಕೆಗೇಡು ಆಗುತ್ತದೆ. ಇದರ ಬಗ್ಗೆ ನಾವೆಲ್ಲರೂ ಕುಳಿತು, ಇದನ್ನು ಪಕ್ಷಾತೀತವಾಗಿ ಚಿಂತನೆ ಮಾಡಿ, ಸರ್ಕಾರ ಯಾವುದಾದರೂ ಒಂದು ಕ್ರಮ ಹಾಕಿಕೊಂಡು ಇದನ್ನು ಸಂಪೂರ್ಣ ಹೊರಗಡೆಗೆ ಕಳುಹಿಸತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು, ಲಕ್ಷಾಂತರ ಜನ ಹೆಣ್ಣುಮಕ್ಕಳು ಅಂದರೆ ಅವರು ತಮ್ಮ ಗಂಡಂದಿರು ಸಂಪಾದನೆ ಮಾಡಿದ ಹಣವನ್ನೆಲ್ಲಾ ಲಾಟರಿಗೆ ಹಾಕಿ, ಮಟ್ಕಾಗೆ ಹಾಕಿ ಆಗತಕ್ಕಂಥ ಅನ್ಯಾಯ ಏನಿದೆ ಇದು ನಿಜವಾಗಲೂ ಬಹಳ ದೊಡ್ಡ ದುರಂತ. ಆ ದೃಷ್ಟಿಯಿಂದ ಸರ್ಕಾರ ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳಬೇಕು. ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಉಪಾಧ್ಯಕ್ಷರೇ, ಇದು ಕೇವಲ ಪಟ್ಟಣ ಪ್ರದೇಶಗಳಲ್ಲಿ ಇಲ್ಲ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲಾ ಕಡೆಯಲ್ಲೂ ಈ ಒಂದಂಕಿ ಲಾಟರಿ

ಖಾಯಂ ಆಗಿ ದಿವಸಕ್ಕೆ ಐದು ಸಾವಿರ ಜನರನ್ನು ಮಂಕಿ ಮಾಡುತ್ತಿದೆ. ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಕೃಷಿ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಹೀಗೆ ಸುಮಾರು ಒಂದು ಕೋಟಿ ಜನರ ಜೀವನ ಅಸ್ತವ್ಯಸ್ತವಾಗುತ್ತದೆ. ಇದು ವಿಶೇಷವಾಗಿ ಗ್ರಾಮೀಣ ಪ್ರದೇಶದ ಮಹಿಳೆಯರ ಮೇಲೆ ಎಂಥೆಂಥ ಪರಿಣಾಮ ಬೀರುತ್ತದೆ ಎನ್ನುವುದನ್ನು ಹೇಳಲು ಅಸಾಧ್ಯ. ಅವರು ದುಡಿದಂಥ ಹಣದಲ್ಲಿ ಪುರುಷರು ಊಟ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ಅವರ ವೇದನೆಯನ್ನು ಕೇಳುವವರು ಯಾರೂ ದಿಕ್ಕಿಲ್ಲ. ಆದ್ದರಿಂದ ದಯವಿಟ್ಟು ಈ ವಿಷಯದಲ್ಲಿ ಸರ್ಕಾರ ಮತ್ತು ಎಲ್ಲರೂ ಅತ್ಯಂತ ಗಂಭೀರವಾಗಿ ಚಿಂತನೆ ಮಾಡಿ, ಈ ಲಾಟರಿ ಬಗ್ಗೆ ಏನಾದರೂ ಒಂದು ಭದ್ರತೆ ಮಾಡದಿದ್ದರೆ ಇದು ಬಹಳ ಕೆಟ್ಟ ಪರಿಣಾಮವನ್ನು ಬಡತನದ ರೇಖೆಯಲ್ಲಿರುವ ಜನರ ಮೇಲೆ ಬೀರುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಉಪಾಧ್ಯಕ್ಷರೇ, ಈ ಒಂದಂಕಿ ಲಾಟರಿ ಪ್ರಶ್ನೆ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಇದೆ. ಮತ್ತು ಮಟ್ಕಾ ಸಹ ಇದೆ. ಈ ಎರಡು ದಂಧೆಗಳ ಹಿಂದೆ ಭೂಗತ ದೊರೆಗಳ ಕೈವಾಡ ಹೆಚ್ಚಾಗಿ ಇದೆ. ಎರಡೂ ಕಡೆಗಳಲ್ಲಿ ಭೂಗತ ದೊರೆಗಳ ಕೈವಾಡ ಅತಿ ಹೆಚ್ಚು ಇದೆ. ಹಾಗಾಗಿ ಇದು ಕೇವಲ ಒಂದಂಕಿ ಲಾಟರಿ, ಮಟ್ಕಾ, ಜೂಜು, ಅಷ್ಟಕ್ಕೇ ಸೀಮಿತವಾಗಿ ಉಳಿದಿಲ್ಲ. ಈ ಭೂಗತ ದೊರೆಗಳು ತಾವು ನಡೆಸತಕ್ಕಂಥ ಎಲ್ಲಾ ದಂಧೆಗಳಿಗೂ ಅದು ಸ್ವರೂಪವಾಗಿದೆ. ಇದರಿಂದ ಭೀಕರವಾದಂಥ ಪರಿಣಾಮವಾಗುತ್ತದೆ. ಬೆಂಗಳೂರು ನಗರದಲ್ಲಿ ಅಷ್ಟೇ ಅಲ್ಲ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮಟ್ಕಾ ಇದೆ. ಈ ಮಟ್ಕಾವನ್ನು ನಿಯಂತ್ರಣ ಮಾಡತಕ್ಕಂಥಾದ್ದು ಬಾಂಬೆಯಲ್ಲಿ ಇರತಕ್ಕಂಥ ಭೂಗತ ದೊರೆಗಳು. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿ ನಡೆಯುತ್ತಾ ಇರತಕ್ಕಂಥ ಒಂದಂಕಿ ಲಾಟರಿ ಮತ್ತು ಮಟ್ಕಾಗಳಿಗೂ ಕೂಡ ಈ ಭೂಗತ ದೊರೆಗಳೇ ನಿರ್ದೇಶನ ಕೊಡತಕ್ಕಂಥಾದ್ದು. ಬಾಂಬೆ ಯಾವ ರೀತಿಯಾಗಿದೆ, ಯಾವ ರೀತಿ ಭೂಗತ ಪ್ರಪಂಚದ ದೊರೆಗಳ ಹಿಡಿತದಲ್ಲಿ ಸಿಕ್ಕಿದೆ, ಅದೇ ರೀತಿಯಲ್ಲಿ ಕೆಲವೇ ದಿವಸಗಳಲ್ಲಿ ಬೆಂಗಳೂರು ನಗರವೂ ಕೂಡ ಆ ಭೂಗತ ದೊರೆಗಳ ಹಿಡಿತದಲ್ಲಿ ಸಿಗುತ್ತದೆ. ಇದರ ಜೊತೆಗೆ ಸ್ಥಳೀಯವಾಗಿರತಕ್ಕಂಥ ಕೆಲವು ಜನ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ. ಬಡವರ ಜೀವನದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ಇದನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕು. ಯಾವುದೇ ರೀತಿಯಲ್ಲಿ ಮೀನ ಮೇಷ ಮಾಡದೇ ಸಂಪೂರ್ಣವಾಗಿ ನಿಷೇಧ ಮಾಡಬೇಕು. ಒಂದಂಕಿ, ಎರಡಂಕಿ, ಮೂರಂಕಿ ಹೀಗೆ ಯಾವ ಅಂಕಿಯೂ ಇಲ್ಲಿ ಬೇಡ. ಎಲ್ಲವನ್ನೂ ಸಂಪೂರ್ಣವಾಗಿ ನಿಷೇಧ ಮಾಡಬೇಕು.

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಉಪಾಧ್ಯಕ್ಷರೇ, ಈ ಒಂದಂಕಿ ಲಾಟರಿ ಬಗ್ಗೆ ನಾನು ಇವತ್ತು ಪ್ರಶ್ನೆ ಕೂಡ ಹಾಕಿದ್ದೆ. ಅದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಯಾಗಿದೆ. ಬೆಂಗಳೂರಿನಲ್ಲಿ ಇತರ ರಾಜ್ಯಗಳ ಒಂದಂಕಿ ಲಾಟರಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಿದ್ದೇನೆ. ಅದಕ್ಕೆ ಸನ್ಮಾನ್ಯ ಮಂತ್ರಿಗಳು ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಏನು ಸ್ವಾಮಿ, ನಮಗೆಲ್ಲರಿಗೂ ಗೊತ್ತಿರತಕ್ಕಂಥಾದ್ದು, ಬೆಂಗಳೂರಿನಲ್ಲಿ ಒಂದಂಕಿ ಲಾಟರಿ ಮಾರಾಟ ಮಾಡುವಂಥಾದ್ದು ನಿಮ್ಮ ಸರ್ಕಾರಕ್ಕೆ ಗೊತ್ತಿಲ್ಲವೇ? ಸರ್ಕಾರಕ್ಕೆ ಕಿವಿ ಇಲ್ಲವೇ? ಕಣ್ಣು ಇಲ್ಲವೇ? ಇದರ ಅರ್ಥ ಏನು ಹೇಳಿ.

ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಕೋದಂಡರಾಮಯ್ಯನವರು ಪೋಲೀಸ್ ಕಮೀಷನರ್ ಆಗಿದ್ದರು. ಆಗ ಬೆಂಗಳೂರಿನಲ್ಲಿ ಎಲ್ಲೂ ಒಂದು ಲಾಟರಿ ಇರಲಿಲ್ಲ, ಮಟ್ಕಾ ಇರಲಿಲ್ಲ. ಈಗ ಅದು ಹೇಗೆ ನಡೆಯುತ್ತಿದೆ? ವಿಡಿಯೋ ಗೇಮ್ಸ್ ಕೂಡ ಇರಲಿಲ್ಲ. ಈಗ ಎಲ್ಲಾ ಪ್ರಾರಂಭವಾಗುತ್ತಿದೆ. ನಮ್ಮ ಎಲ್ಲಾ ಸದಸ್ಯರುಗಳಿಗೆ ಗೊತ್ತಿರತಕ್ಕಂಥಾದ್ದು ಸರ್ಕಾರಕ್ಕೆ ಗೊತ್ತಿಲ್ಲ ಎಂದರೆ ಏನು ಅರ್ಥ ಇದು ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಬೆಂಗಳೂರು ನಗರದ ವಿಚಾರವನ್ನು ಎಲ್ಲಾ ನನ್ನ ಮಾನ್ಯ ಮಿತ್ರ ಶಾಸಕರು ಮಾತನಾಡಿದ್ದಾರೆ. ಬೆಂಗಳೂರು ಮಾತ್ರ ಕರ್ನಾಟಕವಲ್ಲ. ಬೆಂಗಳೂರು ಕರ್ನಾಟಕದ ಕೇಂದ್ರ ಸ್ಥಾನ. ಜಿಲ್ಲಾ ಮಟ್ಟದಲ್ಲಿ ಇವತ್ತು ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಇಲ್ಲೂ ಕೆಲವು ಶಾಸಕರು ಅವರ ಗಮನಕ್ಕೆ ಬಂದಂಥ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಈಗ ಜೂಜಾಟ ಬಹಿರಂಗವಾಗಿ ನಡೆಯುತ್ತಿದೆ. ಪೋಲೀಸಿನವರು ಆ ಸಂದರ್ಭದಲ್ಲಿ ಅಲ್ಲೇ ಇದ್ದರೂ ಸಹ ಅವರು ಕಿವಿ ಇಲ್ಲದಂಥ ಜನ ಆಗಿದ್ದಾರೆ. ಇದು ನಮ್ಮ ಸರ್ಕಾರದವರ ಗಮನಕ್ಕೆ ಇಲ್ಲಿಯವರೆಗೆ ಈ ವಿಚಾರ ಬಂದಿಲ್ಲವೇ? ಬೆಂಗಳೂರಿನ ಶಾಸಕರು ತಮ್ಮ ಜೀವಕ್ಕೇ ಈ ದೊರೆಗಳಿಂದ ಅಪಾಯ ಇದೆ ಎಂದು ಹೇಳಿದರು. ಅವರ ಪಕ್ಷದ ಒಬ್ಬ ಶಾಸಕರ ಜೀವಕ್ಕೇ ಅಪಾಯ ಇದೆ ಎಂದು ಹೇಳುವಂಥ ವಿಚಾರವನ್ನು ಹೇಳುವುದಾದರೆ, ಇನ್ನು ನಾವು ವಿರೋಧ ಪಕ್ಷದ ಸದಸ್ಯರುಗಳನ್ನು ಯಾವ ಅಪಾಯಕ್ಕೆ ಇವರು ಸಿಕ್ಕಿಸುತ್ತಾರೆ ಎನ್ನುವುದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಇದನ್ನು ತಕ್ಷಣವೇ ಸರ್ಕಾರ ಗಂಭೀರವಾಗಿ ಆಲೋಚನೆ ಮಾಡಿ ನಾಳೆ ಬೆಳಿಗ್ಗೆಯಿಂದ ಅಥವಾ ಈಗ ಏನಾದರೂ ನಡೆಯುತ್ತಿದೆ ಎನ್ನತಕ್ಕಂಥ ವಿಚಾರವೇನಾದರೂ ಅವರ ಗಮನಕ್ಕೆ ಬಂದಿದ್ದರೆ ಇವೊತ್ತಿಂದಿವತ್ತೇ ಅದನ್ನು ನಿಲ್ಲಿಸುವಂತೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಆ ಕಡೆ, ಈ ಕಡೆ ನಡೆಯುತ್ತಿದೆ ಎನ್ನತಕ್ಕಂಥ ವಿಚಾರ ಅಲ್ಲ. ಇಡೀ ಸದನದ ಅಭಿಪ್ರಾಯ ಒಂದೇ ಇದೆ. ಒಂದೇ ಮಾತಿನಲ್ಲಿ ಇದನ್ನು ಕಂಪ್ಲೀಟಾಗಿ ಬ್ಯಾನ್ ಮಾಡುತ್ತೇವೆ, ನಾಳೆಯಿಂದ ಇದು ನಡೆಯದ ಹಾಗೆ ಮಾಡುತ್ತೇವೆ ಎಂದು ಹೇಳಿದರೆ ಸಾಕು. ನಮಗೆ ಇನ್ನೇನೂ ಉತ್ತರ ಬೇಡ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಇದು ಅಲ್ಲಲ್ಲಿ ಈ ತರಹ ಒಂದು ಅಂಕಿ ಲಾಟ್ರಿ ಎಂದು ಮೊದಲು ಮಾಡುತ್ತಿದ್ದರು. ಲಾಟರಿ ಟಿಕೆಟ್‌ನಲ್ಲಿ ಅಂಕಿಗಳು ಇರುತ್ತದೆ. ಅಲ್ಲಿಯ ಕೊನೆಯ ಅಂಕಿಯನ್ನು ಹಾಕಿಕೊಂಡು ಮಾಡುತ್ತಿದ್ದರು. ಈಗ ಅದನ್ನು ನಿಲ್ಲಿಸಿ ಬಿಟ್ಟರು. ಕೊನೆಯ ಎರಡು ಅಂಕಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆ ಕಡೆಯಿಂದ ಕೊನೆಯ ಅಂಕಿ ಡಮ್ಮಿಯಾಗಿ ಉಪಯೋಗಿಸಿಕೊಂಡು ಎರಡನೇ ಅಂಕಿಯನ್ನು ಒಂದನೇ ಅಂಕಿ ಎಂದು ತೆಗೆದುಕೊಳ್ಳುತ್ತಿದ್ದಾರೆ. ಈ ತರಹ ಮಾಡುತ್ತಿದ್ದಾರೆ. ಈ ಮಧ್ಯೆ ಹೈಕೋರ್ಟಿನವರು ಬೇರೆ....

ಶ್ರೀ ವಾಟಾಳ್ ನಾಗರಾಜ್ : ಏನಿದು? ಅಭ್ಯಾಸದವರ ರೀತಿ ಹೇಳುತ್ತಿದ್ದಾರಲ್ಲಾ.

ಶ್ರೀ ಸಿದ್ದರಾಮಯ್ಯ : ಇದು ನನ್ನದೇ ಇಲಾಖೆಯಲ್ಲದೇ, ಅಭ್ಯಾಸ ಮಾಡದಿದ್ದರೆ ಅಭ್ಯಾಸ ಮಾಡಿಲ್ಲ ಎಂದು ಹೇಳುತ್ತೀರಿ. ಅಭ್ಯಾಸ ಮಾಡಿಕೊಂಡು ಬಂದರೆ ಹೀಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಿದ್ದರಾಮಯ್ಯನವರು ಅಷ್ಟೊಂದು ಆಳವಾಗಿ ಹೇಳುತ್ತಿರುವುದನ್ನು ನೋಡಿ ಅವರು ಯಾವಾಗಲಾದರೂ ಆಡಿದ್ದಾರಾ ಎಂದು ನನಗೆ ಗುಮಾನಿ ಬಂತು.

ಶ್ರೀ ಸಿದ್ದರಾಮಯ್ಯ : ಇಲ್ಲ ಆಡಲಿಲ್ಲ. ಇದನ್ನು ಆಳವಾಗಿ ನೋಡಿರುವುದರಿಂದ ಇದು ಬಹಳ ಗಂಭೀರವಾದಂಥ ವಿಚಾರ ಎಂದು ನಾನು ಪರಿಗಣಿಸಿದ್ದೇನೆ. ಆದುದರಿಂದ ಅವರೆಲ್ಲಾ ಹೇಳಿರತಕ್ಕಂಥ ಭಾವನೆಗಳನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಇದು ಈಗ ಬೆಂಗಳೂರಿನಲ್ಲಿ ಬಹಳ ನಡೆಯುತ್ತಿದೆ. ಬೇರೆ ರಾಜ್ಯದ ಲಾಟರಿಗಳನ್ನು ಇಲ್ಲಿ ತಂದು ಮಾರಾಟ ಮಾಡುತ್ತಿದ್ದಾರೆ ಅದನ್ನು ನಾವು ನಿಷೇಧ ಮಾಡಲು ಆಗುವುದಿಲ್ಲ. ಕಾನೂನು ರೀತಿಯಾಗಿ ನಾವು ಅದನ್ನು ನಿಷೇಧ ಮಾಡಲಿಕ್ಕೆ ಬರುವುದಿಲ್ಲ. ಅದಕ್ಕೆ ಸುಪ್ರೀಂ ಕೋರ್ಟ್ ಡೈರೆಕ್ಷನ್ ಇದೆ. ಆದರೆ ಅವರಿಗೆ ಒಂದೇ ಅಂಕಿಯ ಲಾಟರಿಯನ್ನು ಮಾಡಬೇಕೆಂದೇನಿಲ್ಲ. ಆದರೆ ಆ ಹೆಸರಿನಲ್ಲಿ ಒಂದು ಅಂಕಿ ಎರಡನೇ ಅಂಕಿ ಎಂದು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ. ಇದರ ಜೊತೆಗೆ ಸುಪ್ರೀಂ ಕೋರ್ಟಿನಿಂದ ಇದಕ್ಕೆ ಇಂಟರ್‌ಫಿಯರ್ ಆಗಬಾರದು, ಪೋಲೀಸ್‌ನವರು ಇದನ್ನು ನಿಲ್ಲಿಸಬಾರದು ಎಂದು ಆರ್ಡರ್ ಬಂದಿದೆ.

SRI S. SURESH KUMAR : Sir, I would read the judgment. It says as follows :

> "I direct the respondents not to interfere with the raid to carry on business of sale of single digit or other lottery tickets of other state Governments. However, if the petitioners are indulging in illegal activities, it is permissible to take appropriate action according to law". ಎಂದಿದೆ.

ಶ್ರೀ ಸಿದ್ದರಾಮಯ್ಯ : ಬೇರೆ ರಾಜ್ಯದವರು ಮಾಡುವುದಕ್ಕೆ ಇಂಟರ್‌ಫಿಯರ್ ಆಗಬೇಡಿ ಎಂದು ಹೈಕೋರ್ಟಿನವರು ಡೈರೆಕ್ಷನ್ ಕೊಟ್ಟಿದ್ದಾರೆ. ಇಲ್ಲಿಗಲ್ ಆ್ಯಕ್ಟಿವಿಟೀಸ್ ವ್ಯಾಖ್ಯಾನ ಮಾಡುವುದು ಬಹಳ ಕಷ್ಟ ಇದೆ. ಆದರೂ ಕೂಡ ಈ ತರಹ ಮಾಡಿದರೆ ಕ್ರಮ ಕೈಗೊಳ್ಳಬೇಕೆಂದು ಪೋಲೀಸ್‌ನವರಿಗೆ ಹೇಳಿದ್ದೇವೆ. Inspite of the direction of the Hon'ble High Court. ಇನ್ನು ನಮ್ಮ ರಾಜ್ಯದ ಲಾಟರಿಯನ್ನು ನಾವು ನಿಲ್ಲಿಸಬಹುದು. ಅದನ್ನು ಮಾಡಲಿಕ್ಕೆ ನಮಗೆ ಅಧಿಕಾರ ಇದೆ. ಆದರೆ ಒಂದು ಅಂಕಿ ನಿಲ್ಲಿಸಿದ ಹಾಗೆ ಆಗುವುದಿಲ್ಲ. ಬೇರೆ ರಾಜ್ಯದಿಂದ ಬರತಕ್ಕಂಥ ಲಾಟರಿಯನ್ನು ನಿರ್ಬಂಧ ಮಾಡುವುದಕ್ಕೆ ಸಾಧ್ಯವಿಲ್ಲ. ಅದೃಷ್ಟವಶಾತ್ ನಮ್ಮ ಪ್ರಧಾನ ಮಂತ್ರಿಯವರು ಕೆಲವು ದಿವಸದ ಹಿಂದೆ ಇಡೀ ದೇಶದಲ್ಲಿ ಲಾಟರಿಯನ್ನು ಪೂರ್ತಿಯಾಗಿ ಬ್ಯಾನ್ ಮಾಡಬೇಕು ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕೆಲವು ದಿವಸಗಳ ಹಿಂದೆ ಇದೇ ಪ್ರಶ್ನೆ ಇಲ್ಲಿ ಉದ್ಭವವಾದಾಗ, ಒಂದು ಅಂಕಿಯ ಲಾಟರಿ

ವಿಷಯ ಪ್ರಸ್ತಾಪ ಆದಾಗ ನಾನೂ ಕೂಡ ಬಹಳ ಕಠಿಣವಾದ ಶಬ್ದಗಳಲ್ಲಿ ಇಡೀ ದೇಶದಲ್ಲಿ ಲಾಟರಿಯನ್ನು ನಿಲ್ಲಿಸಬೇಕೆಂದು ಅಂದಿನ ಪ್ರಧಾನ ಮಂತ್ರಿಯವರಿಗೆ ಒಂದು ಪತ್ರವನ್ನು ಬರೆದಿದ್ದೇನೆ. ಇದರಿಂದ ಬಹಳಷ್ಟು ಸಂಸಾರಗಳು ನಾಶವಾಗುತ್ತಿವೆ ಅದರಲ್ಲಿಯೂ ವಿಶೇಷವಾಗಿ ಬಡವರ ಸಂಸಾರಗಳು ನಾಶವಾಗುತ್ತಿವೆ, ಮಹಿಳೆಯರು ಕಣ್ಣೀರಿನಲ್ಲಿ ಕೈ ತೊಳೆಯುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಆದಕಾರಣ ಈ ಒಂದು ಅಂಕಿಯ ಲಾಟರಿಯನ್ನು ಬ್ಯಾನ್ ಮಾಡಬೇಕೆಂದು ಪತ್ರದಲ್ಲಿ ಬರೆದಿದ್ದೆ. ಮತ್ತೆ ಈಗ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಅಂಕಿಯ ಲಾಟರಿಯನ್ನು ನಿಲ್ಲಿಸುತ್ತೇವೆ ಎಂದು ಹೇಳಿರುವುದರಿಂದ ಮಾನ್ಯ ಗುಜ್ರಾಲ್‌ರವರಿಗೆ ಪುನಃ ಮತ್ತೊಂದು ಕಾಗದವನ್ನು ಬರೆಯುತ್ತೇನೆ. ನಾನು ನಮ್ಮ ರಾಜ್ಯದಲ್ಲಿ ಲಾಟರಿಯನ್ನು ನಿಲ್ಲಿಸಬಹುದು. ಆದರೆ ಬೇರೆ ರಾಜ್ಯಗಳಿಂದ ಬಂದಂಥ ಲಾಟರಿಗಳನ್ನು ನಿಲ್ಲಿಸುವುದಕ್ಕೆ ನನಗೆ ಅಧಿಕಾರ ಇಲ್ಲ. ನಾವು ಅವರಿಗೆ ಅನುಮತಿ ಕೊಡಲೇಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಪೋಲೀಸ್ ಭದ್ರವಾಗಿದ್ದರೆ, ಪೋಲೀಸರಿಂದ ಅವರಿಗೆ ನಾನಾ ತರಹದ ತೊಂದರೆಗಳನ್ನು ಕೊಡಿಸಿ ಹೊರಗೆ ಹಾಕಬಹುದು.

ಶ್ರೀ ಸಿದ್ದರಾಮಯ್ಯ : ಬಹಳಷ್ಟು ಪಿಟಿಷನ್‌ಗಳು ಹೈಕೋರ್ಟಿಗೆ ಹೋದವು. ಒಂದನೇ ಬ್ಯಾಚ್ ಪಿಟಿಷನ್ ಇತ್ಯರ್ಥ ಆಯಿತು. ಎರಡನೇ ಬ್ಯಾಚ್ ಪಿಟಿಷನ್ ಇತ್ಯರ್ಥ ಆಯಿತು. ಬಹಳಷ್ಟು ಪಿಟಿಷನ್‌ಗಳು ಹೈಕೋರ್ಟಿಗೆ ಹೋಗಿದ್ದವು. ಅಲ್ಲಿಂದ ಪೋಲೀಸರೂ ಕೂಡ ಇಂಟರ್‌ಫಿಯರ್ ಆಗಬಾರದು ಎಂದು ಹೈಕೋರ್ಟಿನಿಂದ ಡೈರೆಕ್ಷನ್ ಇದೆ. ಆ ಕಾರಣದಿಂದಾಗಿ ಇದು ಆಗುತ್ತಿಲ್ಲ. ಇದನ್ನು ಸಂಪೂರ್ಣವಾಗಿ ಬ್ಯಾನ್ ಮಾಡಬೇಕೆಂದು ನನ್ನ ಸಹಮತ ಹಾಗೂ ರಾಜ್ಯ ಸರ್ಕಾರದ ಸಹಮತ ಕೂಡ ಇದೆ. ಪೋಲೀಸರಿಗೆ ಎಲ್ಲೆಲ್ಲಿ ಇಲ್ಲಿಗಲ್ ಆಕ್ಟಿವಿಟೀಸ್ ನಡೆಯುತ್ತವೆ ಅಲ್ಲಿ ಅದನ್ನು ನಿಲ್ಲಿಸಬೇಕು ಎಂದು ಕಟ್ಟುನಿಟ್ಟಾದ ಸೂಚನೆಗಳನ್ನು ಕೊಡುತ್ತೇವೆ. ಮತ್ತು ಎಲ್ಲಿ ಗೂಂಡಾಗಳಗಾಲೀ, ಇನ್ನು ಯಾರಾದರೂ ಇದನ್ನು ದುರುಪಯೋಗ ಪಡಿಸಿಕೊಂಡು ಧಾಂದಲೆ ಮಾಡುತ್ತಿದ್ದರೆ ಅದನ್ನು ತಡೆಗಟ್ಟಲು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ನಾನೂ ಕೂಡ ಪುನಃ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆಯುತ್ತೇನೆ. ದೆಹಲಿಗೆ ಹೋದಾಗ ಪ್ರಧಾನ ಮಂತ್ರಿಯವರ ಜೊತೆ ಮಾತನಾಡಿ ಇಡೀ ದೇಶದಲ್ಲಿ ಈ ಲಾಟರಿಯನ್ನು ನಿಲ್ಲಿಸಬೇಕೆಂದು ಒಂದು ತೀರ್ಮಾನವನ್ನು ಮಾಡಬೇಕೆಂದು ಕೇಂದ್ರ ಸರ್ಕಾರದವರಿಗೆ ಒತ್ತಾಯವನ್ನು ತರತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಲಾಟರಿ ಲೀಗಲ್ ಅಥವಾ ಇಲ್ಲಿಗಲ್ ಎಂದು ಜನರಿಗೆ ಹೇಗೆ ಗೊತ್ತಾಗುತ್ತದೆ? ಅದು ಜನರಿಗೆ ಗೊತ್ತಾಗಬೇಕು. Are they not deceiving people? ಆ ನಂಬರ್ ಪೇಜರ್‌ನಲ್ಲಿ ಬರುತ್ತಿದೆ. ಆ ನಂಬರ್ ತೆಗೆದುಕೊಂಡು ಹೇಳುತ್ತಿದ್ದಾರೆ ಅವರು.

SRI SIDDARAMAIAH : They are deceiving. They are carrying on illegal activities. ಅವರು ಗಂಟೆಗೆ ಒಂದೊಂದು ಲಾಟರಿಯನ್ನು ಮಾಡುತ್ತಿದ್ದಾರೆ. ಅದರಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಪೋಲೀಸರಿಗೆ ಕಟ್ಟುನಿಟ್ಟಾದ ಆದೇಶ ಕೊಡುತ್ತೇವೆ. ಹಾಗೆಯೇ ಸಂಪೂರ್ಣವಾಗಿ ಲಾಟರಿ ನಿಲ್ಲಿಸುವುದಕ್ಕೆ ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ತರುತ್ತೇನೆ.

ಉಪಾಧ್ಯಕ್ಷರು : ಈಗ ಸಾಕು, ಅದರ ಬಗ್ಗೆ ಬಹಳಷ್ಟು ಚರ್ಚೆಯಾಯಿತು.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಈ ವಿಚಾರದಲ್ಲಿ ಅಸಹಾಯಕತೆ ತೋರುತ್ತಿದೆ. ಇದರಿಂದ ರಾಜ್ಯದ ಜನತೆ ಹೆಚ್ಚು ತೊಂದರೆಗೆ ಸಿಲುಕಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಇದರಲ್ಲಿ ಅಸಹಾಯಕತೆ ಏನು ಇದೆ? ಪೋಲೀಸರಿಗೆ ಹೇಳುತ್ತೇವೆ. ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ರಾಮಲಿಂಗರೆಡ್ಡಿ : ಕೆಲವು ಕಡೆ ಪೋಲಿಸರು ಶಾಮೀಲಾಗಿದ್ದಾರೆ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಈ ತರಹ ಪೋಲೀಸರು ಶಾಮೀಲಾಗಿದ್ದಾರೆ ಎಂದು ಹೇಳಿದರೆ ಹೇಗೆ?

ಶ್ರೀ ಆರ್ ರೋಷನ್ ಬೇಗ್ : ಆ ತರಹ ಎಲ್ಲಿಯಾದರೂ ಆಗಿದ್ದರೆ ಎಲ್ಲಿ ಆಗಿದೆ ಎಂದು ಹೇಳಿ; ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು : ಅವರು ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತರುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಹಿಂದೆ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ವಿಡಿಯೋ ಗೇಮ್ಸ್‌ಗೆ ಕೂಡ ಕೋರ್ಟ್ ಆದೇಶ ಇತ್ತು. ಆದರೂ ಕೂಡ ಪೋಲೀಸ್‌ನವರು ವಿಡಿಯೋ ಗೇಮ್ಸ್‌ಗೆ ಅಲೋ ಮಾಡಲಿಲ್ಲ. ರಿಕ್ರಿಯೇಷನ್ ಕ್ಲಬ್‌ಗಳಿಗೆ ಅಲೋ ಮಾಡಲಿಲ್ಲ. ಸಿಂಗಲ್ ಲಾಟರಿಯನ್ನು ಅಲೋ ಮಾಡಲಿಲ್ಲ. ಲೈವ್ ಬ್ಯಾಂಡ್ ಅಲೋ ಮಾಡಲಿಲ್ಲ. ಆದರೆ ಇವೆಲ್ಲವೂ ಕೂಡ ಇವೊತ್ತು ಏಕೆ ಆಗುತ್ತಿದೆ.

ಶ್ರೀ ಸಿದ್ಧರಾಮಯ್ಯ : ನಾನೂ ಅದನ್ನೇ ಹೇಳುತ್ತಿದ್ದೇನೆ. ನಿಲ್ಲಿಸತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಕಾನೂನು ರೀತಿಯಾಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಕಾನೂನು ಬಿಟ್ಟು ಮಾಡುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಆ ತರಹ ಏನಾದರೂ ನಡೆಯುತ್ತಿದ್ದರೆ ಅದನ್ನು ಗಂಭೀರವಾಗಿ ಪರಿಗಣಿಸಿ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಲು ಪೋಲೀಸರಿಗೆ ಸೂಕ್ತ ಆದೇಶ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಲಾಟರಿಯಿಂದ ಅನೇಕ ಸಂಸಾರಗಳು ಬೀದಿ ಪಾಲಾಗುತ್ತಿವೆ, ನಾಳೆಯಿಂದ ಈ ಲಾಟರಿ ನಡೆಯದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳಿಬಿಡಿ.

ಶ್ರೀ ಸಿದ್ಧರಾಮಯ್ಯ : ಅದನ್ನು ತಡೆಯಲಿಕ್ಕೆ ಪ್ರಯತ್ನ ಮಾಡುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಏನು ಪ್ರಯತ್ನ? ನಡೆಯುವುದಕ್ಕೆ ಬಿಡುವುದಿಲ್ಲ ಎಂದು ಹೇಳಿ.

ಶ್ರೀ ಸಿದ್ಧರಾಮಯ್ಯ : ಹೈಕೋರ್ಟ್ ಆರ್ಡರ್ ಪೋಲೀಸರಿಗೆ ಇಂಟರ್‌ಫಿಯರ್ ಮಾಡಬಾರದು ಎಂದು ಇದ್ದಾಗ...

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಒಂದು ಅಂಕಿ....

ಶ್ರೀ ಸಿದ್ದರಾಮಯ್ಯ : ಪೋಲೀಸರು ಇಂಟರ್‌ಫಿಯರ್ ಆಗಬಾರದು ಎಂದು ಇದೆ. ಆದರೆ ಇಲ್ಲಿಗಲ್ ಆಕ್ಟಿವಿಟೀಸ್ ಎಲ್ಲೆಲ್ಲಿ ನಡೆಯುತ್ತದೆ ಅದನ್ನು ತಡೆಗಟ್ಟಲು ಕ್ರಮ ಕೈಗೊಳ್ಳುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈ ಹಿಂದಿನ ಸರ್ಕಾರ ಅದನ್ನು ನಿಯಂತ್ರಿಸಿದಾಗ ಈ ಸರ್ಕಾರ ಏತಕ್ಕೆ ಫೇಲ್ ಆಯಿತು?

ಶ್ರೀ ಸಿದ್ದರಾಮಯ್ಯ : ಹೈಕೋರ್ಟ್ ಡಿಸಿಷನ್.....

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಸನ್ಮಾನ್ಯ ಉಪಾಧ್ಯಕ್ಷರೆ, ನಾನು ನನ್ನ ಕ್ಷೇತ್ರದಲ್ಲಿ ನಡೆದಂಥ ಒಂದು ಘಟನೆಯನ್ನು ಪ್ರಸ್ತಾಪ ಮಾಡಲಿಚ್ಚಿಸುತ್ತೇನೆ. ಈ ಸಿಂಗಲ್ ಡಿಜಿಟ್ ನಡೆಯುವಂಥ ಒಂದು ಸ್ಥಳದಲ್ಲಿ ಇಬ್ಬರು ಮುಸಲ್ಮಾನ ಹೆಂಗಸರು ಘೋಷಾ ಹಾಕಿಕೊಂಡು ಬಂದು ನಿಂತರು. ಅಲ್ಲಿ ನಿಂತವರಿಗೆಲ್ಲಾ ಏನಪ್ಪ ಇವರು ಬಂದಿದ್ದಾರೆಂದು ಆಶ್ಚರ್ಯವಾಯಿತು. ಅವರ ಮನೆಯ ಗಂಡಸರು ಅಲ್ಲಿದ್ದರು. ಆ ಇಬ್ಬರು ಹೆಂಗಸರು ಕಾಲಲ್ಲಿದ್ದ ಚಪ್ಪಲ್ ತೆಗೆದುಕೊಂಡು ಹೊಡೆದರು ಹಾಗೂ ಅವರನ್ನು ಅಲ್ಲಿಂದ ಓಡಿಸಿದರು. ಆ ರೀತಿ ಮನೆಯಲ್ಲಿ ಹೆಂಗಸರು ಎಚ್ಚರ ಆದಾಗ ಅದನ್ನು ನಿಲ್ಲಿಸಲು ಸಾಧ್ಯವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಉಪಾದ್ಯಕ್ಷರೆ, ನಾನು ನಿಮಗೆ ಬೇಡಿಕೊಳ್ಳುವುದು ಏನೆಂದರೆ ಈ ಸಭೆಯಿಂದ ಈ ಸದನದಿಂದ ಇಡೀ ರಾಜ್ಯಕ್ಕೆ ಪಾಸಿಟಿವ್ ಸಿಗ್ನಲ್ ಹೋಗಬೇಕೇ ಹೊರತು ಸಿಂಗಲ್ ಲಾಟರಿಯವರಿಗೆ ಧೈರ್ಯ ಬರುವ ಹಾಗೆ ಆಗಬಾರದು, ಸರ್ಕಾರದವರಲ್ಲಿ ಕೆಪ್ಯಾಸಿಟಿ ಇಲ್ಲ, ಸುಪ್ರೀಮ್ ಕೋರ್ಟಿಗೆ ಮೋರೆ ಹೋಗುತ್ತಾರೆ.....

ಶ್ರೀ ಸಿದ್ಧರಾಮಯ್ಯ : ನೀವು ವಕೀಲರಾಗಿದ್ದವರು ಹೀಗೆ ಮಾಡಿದರೆ ಹೇಗೆ? ಅವರು ನಡೆಸಬೇಕು, ಅವರನ್ನು ಕುಮ್ಮಕ್ಕು ಕೊಡಬೇಕೆಂದು ಹೇಳಿದ್ದೇನಾ ನಾನು? ಅದನ್ನು ನಿಲ್ಲಿಸಲಿಕ್ಕೆ ಪೋಲೀಸ್‌ನವರಿಗೆ ಕಟ್ಟುನಿಟ್ಟಿನ ಆದೇಶ ಕೊಡುತ್ತೇವೆ.

5.20 ಪಿ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಕೈಯಲ್ಲಿ ನಿಲ್ಲಿಸುವುದಕ್ಕೆ ಆಗುತ್ತದೋ ಇಲ್ಲವೋ ಎಂಬುದನ್ನು ಹೇಳಿ.

ಶ್ರೀ ಸಿದ್ದರಾಮಯ್ಯ : ಒಂದಂಕಿ ಲಾಟರಿ ಕ್ರಮವನ್ನು ನಿಲ್ಲಿಸುವುದಕ್ಕೆ ನಾವು ಎಲ್ಲಾ ಕ್ರಮ ಕೈಗೊಳ್ಳುತ್ತೇವೆ.

ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ವಿತರಣೆಯಲ್ಲಿರುವ ತಾರತಮ್ಯ

+ ಶ್ರೀ ವೈದ್ಯನಾಥ್ ಪಾಟೀಲ್ (ಚಿಂಚೋಳಿ) : ಈಗ ನಾಳೆಯಿಂದ ಮೆಡಿಕಲ್ ಮತ್ತು ಇಂಜಿನಿಯರಿಂಗ್‌ಗಾಗಿ ಅಡ್ಮಿಷನ್ ಪ್ರಾರಂಭವಾಗುತ್ತಿದೆ. ಎರಡು ವರ್ಷಗಳ ಹಿಂದೆ ನಾನು ಮಂತ್ರಿಮಂಡಲದಲ್ಲಿ ಇದ್ದಾಗ, ಬಾಂಬೆಗೆ ಹೋಗಿದ್ದಾಗ ಮಹಾರಾಷ್ಟ್ರದಲ್ಲಿ ಕೆಲವು ಹಿಂದುಳಿದ ಪ್ರದೇಶಗಳಿಗೆ ಪ್ರೊಫೆಷನಲ್ ಕಾಲೇಜ್‌ಗಳಲ್ಲಿ ರಿಸರ್ವೇಷನ್ ನೀಡುತ್ತಿದ್ದಾರೆ. ಮತ್ತು ಸರ್ಕಾರಿ ನೌಕರರಿಗೂ ಸಹ ಒಂದು ರಿಸರ್ವೇಷನ್ ಕೂಡತಕ್ಕೆ ವ್ಯವಸ್ಥೆ ಇದೆಯೆಂದು ನನಗೆ ತಿಳಿದುಬಂತು. ಅದನ್ನು ಸ್ಪಡಿ ಮಾಡಿ ಆಗಿನ ಮುಖ್ಯಮಂತ್ರಿಗಳಾಗಿದ್ದ ದೇವೇಗೌಡರವರಿಗೆ ಒಂದು ಮಿನಿಟ್‌ನ್ನು ಕಳುಹಿಸಿದ್ದೆ. ಅವರು ಅಂಥದ್ದೇ ವ್ಯವಸ್ಥೆಯನ್ನು ಇಲ್ಲಿ ಸಹ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರು. ಮುಂದಿನ ವರ್ಷ ಅವರು ಪ್ರಧಾನಮಂತ್ರಿಗಳಾಗಿ ಹೋದರು, ಮತ್ತೆ ಜೆ.ಹೆಚ್. ಪಟೇಲ್‌ರವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಬಂದರು. ಹೋದ ವರ್ಷ ನಾನು ಅವರಿಗೆ ಒಂದು ಪತ್ರವನ್ನು ಬರೆದೆ, ಆದರೆ ಏನೂ ಆಗಲಿಲ್ಲ. ಈ ಸಲ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ, ಅವರಿಗೆ ನನ್ನ ಬೇಡಿಕೆಯ ವಿಷಯವನ್ನು ತಿಳಿಸಿ, ಇದು ಎಲ್ಲಾ ರಾಜ್ಯಗಳಲ್ಲೂ ಇದೆ, ನಮ್ಮಲ್ಲೂ ಸಹ ಮಾಡಬೇಕೆಂದು ಹೇಳಿದೆ. ಅದಕ್ಕೆ ಅವರು ಒಪ್ಪಿಕೊಂಡರು. ಆದರೆ ನಂತರ ಅವರು ವಿದೇಶಕ್ಕೆ ಹೋದರು, ಸಿಇಟಿ ರಿಸಲ್ಟ್ ಸಹ ಬಂತು. ಏನೂ ಮಾಡಲಿಕ್ಕೆ ಆಗಲಿಲ್ಲ. ನಾಳೆಯಿಂದ ಅಡ್ಮಿಷನ್ ಪ್ರಾರಂಭವಾಗುತ್ತಿದೆ. ಅಡ್ಮಿಷನ್ ಆದ ನಂತರ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾಳೆ ಅಡ್ಮಿಷನ್ ಪ್ರಾರಂಭ ಮಾಡುವುದನ್ನು ತಡೆಹಿಡಿದು ನಿಲ್ಲಿಸಿ, ಸಿಇಟಿ ಎಕ್ಸಾಮ್ ಅನ್ನು ರೀಜನಲ್‌ವೈಸ್ ಮಾಡಬೇಕು ಅಥವಾ ಯುನಿವರ್ಸಿಟಿ ವೈಸ್ ಮಾಡಬೇಕು. ಮತ್ತು ಪಿಯುಸಿ ಬೋರ್ಡ್ ಕೂಡ ಬೇರೆ ಬೇರೆ ಆದರೆ ಮಾತ್ರ ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತದೆ. ಇಲ್ಲದಿದ್ದಲ್ಲಿ ಇವತ್ತು ಮೆಡಿಕಲ್‌ಗಾಗಲಿ, ಇಂಜನಿಯರಿಂಗ್‌ಗಾಗಲಿ, ಅಥವಾ ವೆಟರ್‌ನರಿ ಕಾಲೇಜುಗಳಲ್ಲಾಗಲಿ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳಿಗೆ ಅವಕಾಶ ಸಿಗುವುದಿಲ್ಲ. ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಅವರೊಂದಿಗೆ ಅಲ್ಲಿನ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆವು. ಅಲ್ಲಿ ಬಿಲ್ಡಿಂಗ್ ಮಾತ್ರ ಇಲ್ಲಿಯದು, ಕಲಿಸುವಂತಹ ಲೆಕ್ಚರರ್ಸ್ ಕೂಡ ಹೊರಗಿನವರು. ಇದನ್ನು ನೋಡಿದ ದೇವೇಗೌಡರು ಅವರು ಭಾಷಣದಲ್ಲಿ ಇದರ ಬಗ್ಗೆ ಒಂದು ಹೊಸ ವ್ಯವಸ್ಥೆಯನ್ನು ಮಾಡುತ್ತೇನೆ ಎಂದು ಹೇಳಿದರು. ಆದರೆ ಈ ತನಕ ಆಗಿಲ್ಲ. ಇದು ಒಂದು ರೀತಿಯ ಮಲತಾಯಿ ಧೋರಣೆ ತೋರುತ್ತಿದ್ದಾರೆ. ಇದರ ಬಗ್ಗೆ ನನ್ನ ಹತ್ತಿರ ಕರಡು ವರದಿ ಇದೆ. ನಮ್ಮ ಭಾಗದ ಮತ್ತು ಹಿಂದುಳಿದ ಭಾಗದವರಿಗೆ ನೌಕರಿಯಲ್ಲಿ